ನಿಧನರಾದ ಯೋಧರ ಪತ್ನಿಯರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ. ಆದರೆ, ನಿಜಜೀವನದಲ್ಲಿ ಅವರು ಎದುರಿಸುವ ತೊಂದರೆಗಳನ್ನು ಪರಿಹರಿಸಲು ವ್ಯವಸ್ಥೆಗಳಿಲ್ಲ. ಹಲವು ವಿಧವೆಯರಿಗೆ, ತಮ್ಮ ಹಕ್ಕುಗಳೇನು, ದೊರಕಬೇಕಾದ ಪಿಂಚಣಿ ಹಣ ಎಷ್ಟು ಎಂಬುದರ ಅರಿವಿಲ್ಲ. ಪಿಂಚಣಿ ಪಡೆಯಲು ಅರ್ಜಿ ಹಾಕುವ ರೀತಿ ಕೂಡ ಅವರು ತಿಳಿದಿಲ್ಲ.

ಪುಷ್ಪಾವತಿ ದೇವಿ (ಹೆಸರು ಬದಲಾಯಿಸಲಾಗಿದೆ) ಅವರ ಕಥೆ ಕೇಳಿ. ಆಕೆ ಅವಿದ್ಯಾವಂತೆ. ಯೋಧ ಲಾನ್ಸ್ ನಾಯಕ್ ಸಿಂಗ್ ಅವರನ್ನು ಕಳೆದುಕೊಂಡ ಈ ಹೆಣ್ಣುಮಗಳಿಗೆ ತನಗೆ ದೊರೆತ 7.5 ಲಕ್ಷ ರೂಪಾಯಿ ಮೊತ್ತದಲ್ಲಿ ಎಷ್ಟು ಸೊನ್ನೆ ಇದೆಯೆಂಬುದೇ ತಿಳಿದಿರಲಿಲ್ಲ. ಇಂತಹ ಸಂದರ್ಭಗಳಲ್ಲಿ ಯೋಧನ ಆಶ್ರಿತರಾದ ಇತರೆ ಕುಟುಂಬದವರು ಹಣವನ್ನು ಪಡೆಯುತ್ತಾರೆ. ವಯೋವೃದ್ಧರಾದ ತಂದೆ ತಾಯಂದಿರು, ದುಡಿಯುವ ಮಕ್ಕಳಿದ್ದರೂ ಯೋಧನ ಪಿಂಚಣಿಗೆ ಕೈಹಾಕುತ್ತಾರೆ. ವೃದ್ಧ ತಂದೆ ತಾಯಂದಿರನ್ನು ಮುಂದೆ ಇರಿಸಿ ಕುಟುಂಬದರು ಹಣವನ್ನು ಪಡೆಯುವುದರೊಂದಿಗೆ ಯೋಧನ ಪತ್ನಿ–ಮಕ್ಕಳು ಸಹಾಯದಿಂದ ವಂಚಿತರಾಗುತ್ತಾರೆ.

## ಅಮಾಯಕತೆಯ ಲಾಭ ಪಡೆವ ಹಿತಶತ್ರುಗಳು

ಬೆಳಗಾವಿಯ ಸುಧಾ (ಹೆಸರು ಬದಲಾಯಿಸಲಾಗಿದೆ) ಹುತಾತ್ಮ ಯೋಧ ಹನುಮಂತಪ್ಪ ಅವರ ಪತ್ನಿ. ಆಕೆಗೆ ಗ್ಯಾಸ್ ಏಜೆನ್ಸಿ ನಡೆಸುವ ಪರವಾನಗಿ ದೊರಕಿತು. ಆದರೆ ಆ ಪರವಾನಗಿಯ ಪೂರ್ಣ ಪ್ರಯೋಜನ ಪಡೆದುಕೊಳ್ಳುತ್ತಿರುವುದು ಆಕೆಯ ಸಂಬಂಧಿಕರು. ಗ್ಯಾಸ್ ಏಜನ್ಸಿ ಎಲ್ಲಿದೆ ಎಂಬುದೇ ಸುಧಾ ಅವರಿಗೆ ತಿಳಿದಿಲ್ಲ. ಈ ಏಜೆನ್ಸಿಯ ಬದಲಿಗೆ ಸಂಬಂಧಿಕರಿಂದ ಪ್ರತಿ ತಿಂಗಳು 3 ಸಾವಿರ ರೂಪಾಯಿ ಸುಧಾಳಿಗೆ ದೊರೆಯುತ್ತಿದೆ.

ಒರಿಸ್ಸಾದ ಕಬಿತ ಸಾಹೂ (ಹೆಸರು ಬದಲಾಯಿಸಲಾಗಿದೆ) ಅವರಿಗೆ ಪೆಂಟ್ರೋಲ್ ಪಂಪ್ ನಡೆಸುವ ಪರವಾನಗಿ ದೊರಕಿತು. ಆದರೆ, ಅವಿದ್ಯಾವಂತೆಯಾದ, ತನ್ನ ಹಳ್ಳಿಯಿಂದ ಆಚೆ ಕಾಲಿಡದ ಕಬಿತ ಪೆಟ್ರೋಲ್ ಪಂಪ್ ನಡೆಸಲು ಹೇಗೆ ಸಾಧ್ಯ? ಕೆಲವು ಸಮಯದ ಹಿಂದೆ ತನ್ನ ಗಂಡನ ಕಡೆಯವರು ಯಾವುದೋ ಪತ್ರಗಳಿಗೆ ಹೆಬ್ಬೆಟ್ಟು ಗುರುತು ಹಾಕಿಸಿಕೊಂಡಿದ್ದಷ್ಟೇ ಆಕೆಯ ನೆನಪಿನಲ್ಲಿರುವ ವಿಚಾರ.

ಯೋಧನ ಆಶ್ರಿತರಿಗೆ /ವಿಧವೆಯರಿಗೆ ಸರ್ಕಾರ ಅನುಕೂಲಗಳನ್ನು ಘೋಷಿಸಿದ್ದರೂ ಹಲವರಿಗೆ ಅರ್ಹ ಅನುಕೂಲಗಳು ಲಭ್ಯವಾಗುವುದಿಲ್ಲ. ಯೋಧ ಮರಣಹೊಂದಿದ ನಂತರ ಆತನ ಉಳಿದ ಸೇವಾದಿನಗಳಲ್ಲಿ ಕುಟುಂಬಕ್ಕೆ ಪೂರ್ಣ ಸಂಬಳ ಸಿಗುತ್ತದೆ. ಆದರೆ ಇತರೆ ಕೇಂದ್ರ ಸರ್ಕಾರ ಕೆಲಸಗಳಂತೆ 30–40 ವರ್ಷಗಳ ಸೇವಾವಧಿ ಯೋಧರಿಗೆ ಇರುವುದಿಲ್ಲ. ಯೋಧರು 17 ವರ್ಷಗಳ ಕಾಲ ಅಥವಾ ತಮ್ಮ 42ನೇ ವಯಸ್ಸಿನಲ್ಲಿ ನಿವೃತ್ತಿಗೊಳ್ಳಬೇಕು. ಹಾಗಾಗಿ ಮೃತಯೋಧನ ಪೂರ್ಣ ಸಂಬಳ ಬಹುತೇಕ ಸಮಯದಲ್ಲಿ ಕೆಲವು ಸಮಯವಷ್ಟೇ ಆತನ ಕುಟುಂಬದವರಿಗೆ ದೊರೆಯುತ್ತದೆ. ಒಂದು ವೇಳೆ ವೃದ್ಧ ತಂದೆ ತಾಯಂದಿರಿದ್ದಲ್ಲಿ ಅವರಿಗೆ ಸಂಬಳ ಪಡೆಯಲು ಪ್ರಥಮ ಆದ್ಯತೆ ನೀಡಲಾಗುತ್ತದೆ.

**ದೇಶಕ್ಕಾಗಿ ಪ್ರಾಣವನ್ನೇ ಮುಡಿಪಾಗಿಟ್ಟ ಯೋದರಲ್ಲಿ 1990ರಿಂದ ಈವರೆಗೂ, ಸುಮಾರು 19 ಸಾವಿರಕ್ಕೂ ಹೆಚ್ಚು ಮಂದಿ ವೀರಮರಣವನ್ನು ಹೊಂದಿದ್ದಾರೆ. ಅವರಲ್ಲಿ ಶೇ. 90ರಷ್ಟು ಯೋಧರು 40 ವಯಸ್ಸಿಗಿಂತ ಕಡಿಮೆ ಪ್ರಾಯದವರು. ಅವರ ಪತ್ನಿಯರಿಗೆ ಅಕಾಲಕ ದೀರ್ಘ ವೈಧವ್ಯ...**

ಸಿಆರ್‌ಪಿಎಫ್, ಬಿಎಸ್‌ಎಫ್, ಸಿಐಎಸ್‌ಎಫ್ ರೀತಿಯ ಅರೆಸೈನಿಕ ಸೇನೆಯಲ್ಲಿನ ಸೈನಿಕನಿಗೆ ಮರಣಾನಂತರ ಅನುಕೂಲಗಳು ಅತೀವ ಕಡಿಮೆ. ಕಠಿಣ ಪರಿಶ್ರಮದಿಂದ ದೇಶಸೇವೆಯಲ್ಲಿ ತೊಡಗುವ ಇವರು, ತಮ್ಮ ಕುಟುಂಬಗಳಿಂದ ದೂರ ಉಳಿದು ದೇಶಕ್ಕಾಗಿ ಪ್ರಾಣವನ್ನೇ ಮುಡಿಪಾಗಿಡುವರು. 1990ರಿಂದ ಇಂದಿನವರೆಗೂ, ಸುಮಾರು 19 ಸಾವಿರಕ್ಕೂ ಹೆಚ್ಚು ಯೋಧರು ವೀರಮರಣವನ್ನು ಹೊಂದಿದ್ದಾರೆ. ಇವರಲ್ಲಿ 90 ಭಾಗ ಯೋಧರು 40 ವಯಸ್ಸಿಗಿಂತ ಕಡಿಮೆ ಪ್ರಾಯದವರು. ಇವರ ಪತ್ನಿಯರು ಯುವತಿಯರಾಗಿರುತ್ತಾರೆ ಎಂಬುದರಲ್ಲಿ ಸಂದೇಹವೇ ಇಲ್ಲ.

ಯೋಧರ ಜೀವನದಲ್ಲಿ ಮತ್ತೊಂದು ಅಸಹನೀಯ ಸಂದರ್ಭವೂ ಇದೆ. ಅದು ಸಾವು–ಬದುಕಿನ ನಡುವಿನ ಹೋರಾಟ. ಮರಣಹೊಂದಿಲ್ಲ, ಆದರೆ ಸಾವಿಗೂ ಹೀನಾಯವಾದ ಪರಿಸ್ಥಿತಿಯಲ್ಲಿ ಬಾಳುವ ಸ್ಥಿತಿಯಿದು. ಯುದ್ಧಗಳಲ್ಲಿ, ಆಂತರಿಕ ಸಂಘರ್ಷಗಳಲ್ಲಿ ಭಾಗವಹಿಸಿದಾಗ ಅಂಗವೈಕಲ್ಯ ಉಂಟಾಗುವ ಇಲ್ಲವೇ ಶರೀರ ಪೂರ್ಣವಾಗಿ ನಿಷ್ಕ್ರಿಯಗೊಳ್ಳುವ ಸಾಧ್ಯತೆಯಿದೆ. ಇಂತಹ ಸಂದರ್ಭಗಳಲ್ಲಿ ತುರ್ತು ಅಗತ್ಯವಾದ ವೈದ್ಯಕೀಯ ಚಿಕಿತ್ಸೆಯನ್ನು ಉಚಿತವಾಗಿ ನೀಡಿದರೂ, ಪೂರ್ಣ ಗುಣಹೊಂದದೆ, ಹಾಸಿಗೆ ಹಿಡಿದು ಕೊನೆಯತನಕ ಪರಸಹಾಯ ಪಡೆಯಬೇಕಾದ ಸ್ಥಿತಿ ಅಸಹನೀಯವಾದುದು. ಇಂತಹ ಸಂಘರ್ಷಭರಿತ ಜೀವನದಲ್ಲಿ, ಕಡಿಮೆ ಪಿಂಚಣಿಯಿಂದ ಜೀವನ ದೂಡುವುದು ಕಷ್ಟಕರ. ಯೋಧನ ಪತ್ನಿ ಕೌಟುಂಬಿಕ ಜವಾಬ್ದಾರಿಗಳ ಭಾರವನ್ನು ಹೊತ್ತುಕೊಳ್ಳುತ್ತಾಳೆ. ಪರಸಹಾಯ ಬೇಕಾದ ಗಂಡನ ಆರೈಕೆ ಮಾಡಬೇಕು, ಜೊತೆಗೆ ನೌಕರಿಗೂ ಹೋಗಿ ಕುಟುಂಬದ ನಿರ್ವಹಣೆ ಮಾಡಬೇಕು. ವಿಪರ್ಯಾಸ ಎಂದರೆ, ಈಕೆಗೆ ಯೋಧವಿಧವೆಯರಿಗೆ ದೊರಕುವ ಅನುಕಂಪವಾಗಲೀ ಸೌಲಭ್ಯಗಳಾಗಲಿ ದೊರೆಯುವುದಿಲ್ಲ. ಆದರೆ ಅವರ ಸ್ಥಿತಿ ಯೋಧವಿಧವೆಗಿಂತ ಸಂಕೀರ್ಣವಾಗಿರುತ್ತದೆ.

## ನೆಮ್ಮದಿ-ಘನತೆಯ ಬದುಕು ಬೇಕು

ಅರ್ಹರಿಗೆ ಸೌಲಭ್ಯಗಳು ದೊರಕುತ್ತಿವೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸುವ ಪರಿಣಾಮಕಾರಿ ವ್ಯವಸ್ಥೆಯನ್ನು ಸರ್ಕಾರದ ಕೈಗೊಳ್ಳಬೇಕು. ಯೋಧ ವಿಧವೆಯರಿಗೆ ವೃತ್ತಿ ಕೌಶಲ್ಯಗಳ ತರಬೇತಿ ನೀಡುವ ಮೂಲಕ ಜೀವನೋಪಾಯದ ಸಾಧ್ಯತೆಗಳ ಕಲ್ಪಿಸಿಕೊಡುವುದರಲ್ಲಿ 'ವಾರ್ ವಿಡೋ ಅಸೋಸಿಯೇಷನ್ ಆಫ್ ಇಂಡಿಯಾ' ಯಶಸ್ವಿಯಾಗಿದೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿನ ಯೋಧ ವಿಧವೆಯರನ್ನು ಗುರುತಿಸಿ ಅವರನ್ನು ಸಶಕ್ತರನ್ನಾಗಿಸುವುದು ಈ ಸಂಸ್ಥೆಗೆ ಸಾಧ್ಯವಾಗಿಲ್ಲ. ಉಳಿದಂತೆ, ಸ್ವಯಂ ಸೇವಾ ಸಂಸ್ಥೆಗಳು, ಸ್ವಯಂ ಸಹಾಯ ಗುಂಪುಗಳು ವೃತ್ತಿಪರ ತರಬೇತಿಗಳನ್ನು ನೀಡಿ ಉದ್ಯೋಗ ಮೇಳಗಳ ಸಹಾಯದಿಂದ ಆರ್ಥಿಕ ಗುಣಮಟ್ಟ ಸುಧಾರಿಸುವುದರಲ್ಲಿ ನೆರವಾಗಿದ್ದಾರೆ. ಆದರೆ ಇಂತಹ ಸಂಸ್ಥೆಗಳೂ ಗ್ರಾಮೀಣ ಒಳ ಪ್ರದೇಶಗಳಿಗೆ ಹೋಗಿ ಅರ್ಹರಿಗೆ ಸಹಾಯಮಾಡಲು ಯಶಸ್ವಿಯಾಗಿಲ್ಲ

ದೇಶಕ್ಕಾಗಿ ಪರಮೋನ್ನತ ತ್ಯಾಗ ಮಾಡಿದ ವೀರಯೋಧರ ವಿಧವೆಯರು ಹಾಗೂ ಅವರ ಮಕ್ಕಳ ಯೋಗಕ್ಷೇಮ ನಾಗರಿಕ ಸಮಾಜದ ಪ್ರತಿಯೊಬ್ಬರ ನೈತಿಕ ಕರ್ತವ್ಯ. ಅವರು ನಮಗೆ ನೀಡುವ ಕೊಡುಗೆಗೆ ನಾವು ಏನನ್ನು ನೀಡಿದರೂ ತಾಳೆಯಾಗುವುದಿಲ್ಲ.

ಯೋಧರ ಯುವ ವಿಧವೆಯರು ಯಾವುದೇ ಹಿಂಜರಿಕೆಯಿಲ್ಲದೆ, ಸ್ವತಂತ್ರವಾಗಿ ಸಶಕ್ತಳಾಗಿ ಬದುಕುವ ಹಕ್ಕನ್ನು ಕಲ್ಪಿಸಿಕೊಡುವುದು ಹಾಗೂ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಇಂದಿನ ಅಗತ್ಯ. ದೇಶಕ್ಕಾಗಿ ಮಡಿದವರ ಕುಟುಂಬದವರು ಯಾರಲ್ಲಿಯೂ ಕೈಚಾಚದೆ ಘನತೆ ಗೌರವದಿಂದ ಬದುಕಲು ಸಾಧ್ಯವಾಗಬೇಕು. ಸಾವನ್ನಪ್ಪಿದ ತಂದೆಯ ಮರಣ ಪ್ರಮಾಣಪತ್ರ ಹಿಡಿದು ಸಾಲಿನಲ್ಲಿ ನಿಂತು, ಕಚೇರಿಯಿಂದ ಕಚೇರಿಗೆ ಅಲೆದು, ಕೊನೆಗೆ ತನ್ನ ತಂದೆಯ ದೇಶಭಕ್ತಿ ಸಾಬೀತುಪಡಿಸಿ ಸಹಾಯವನ್ನು ಭಿಕ್ಷೆಯ ರೀತಿ ಪಡೆಯಬೇಕಾದ ದುರದೃಷ್ಟಕರ ಸ್ಥಿತಿ ನಮ್ಮ ವ್ಯವಸ್ಥೆಯಲ್ಲಿರುವುದು ನಾಗರಿಕ ಸಮಾಜ ತಲೆತಗ್ಗಿಸುವ ಸಂಗತಿಯೇ. ■